# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 182 (170)

ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಕಾಫಿ, ಕಾಳುಮೆಣಸು, ಏಲಕ್ಕಿ, ಕಿತ್ತಳೆ ಮತ್ತು ಇತರ ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ: (ತಾಲ್ಲೂಕುವಾರು ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಕಾಫಿ, ಕಾಳುಮೆಣಸು, ಏಲಕ್ಕಿ, ಕಿತ್ತಳೆ ಮತ್ತು ಇತರ ತೋಟಗಾರಿಕಾ ಬೆಳೆಗಳ ಅಭಿವೃದ್ಧಿಗೆ ಅಂದರೆ 2023-24 ನೇ ಸಾಲಿನಲ್ಲಿ ರೂ1010.91 ಲಕ್ಷ, 2024-25 ನೇ ಸಾಲಿನಲ್ಲಿ ರೂ. 1310.12 ಲಕ್ಷ ಮತ್ತು 2025-26 ನೇ ಸಾಲಿನಲ್ಲಿ ರೂ. 1609.39 ಲಕ್ಷ ಒಟ್ಟಾರೆ ರೂ. 3930.42 ಲಕ್ಷ ಅನುದಾನ ಒದಗಿಸಲಾಗಿದೆ.<br><br>( ರೂ.ಲಕ್ಷಗಳಲ್ಲಿ) |

| ಬೆಳೆ | ಮಡಿಕೇರಿ | ಸೋಮವಾರ ಪೇಟೆ | ವೀರಾಜ ಪೇಟೆ | ಪೊನ್ನಂ ಪೇಟೆ | ಒಟ್ಟು |
|---|---|---|---|---|---|
| 2023-24 | | | | | |
| ಕಿತ್ತಳೆ | 6.00 | 6.00 | 0.00 | 6.00 | **18.00** |
| ಕಾಳುಮೆಣಸು | 17.00 | 23.00 | 0.00 | 22.00 | **62.00** |
| ಏಲಕ್ಕಿ | 3.50 | 8.99 | 0.00 | 2.50 | **14.99** |
| ಕಾಫಿ | 229.62 | 206.30 | 147.00 | 333.00 | **915.92** |
| ಒಟ್ಟು | **256.12** | **244.29** | **147.00** | **363.50** | **1010.91** |
| 2024-25 | | | | | |
| ಕಿತ್ತಳೆ | 8.00 | 10.00 | 0.00 | 4.00 | **22.00** |
| ಕಾಳುಮೆಣಸು | 12.00 | 8.00 | 0.00 | 8.00 | **28.00** |
| ಏಲಕ್ಕಿ | 6.00 | 16.43 | 0.00 | 4.19 | **26.62** |
| ಕಾಫಿ | 336.47 | 252.03 | 254.00 | 391.00 | **1233.50** |
| ಒಟ್ಟು | **362.47** | **286.46** | **254.00** | **407.19** | **1310.12** |
| 2025-26 | | | | | |
| ಕಿತ್ತಳೆ | 0.72 | 1.44 | 0.00 | 0.72 | **2.88** |
| ಕಾಳುಮೆಣಸು | 13.00 | 13.00 | 0.00 | 14.00 | **40.00** |
| ಏಲಕ್ಕಿ | 6.00 | 14.86 | 0.00 | 5.19 | **26.05** |
| ಕಾಫಿ | 208.04 | 560.42 | 193.00 | 579.00 | **1540.46** |
| ಒಟ್ಟು | **227.76** | **589.72** | **193.00** | **598.91** | **1609.39** |
| ವರ್ಷವಾರು ಒಟ್ಟು | **846.35** | **1120.47** | **594.00** | **1369.60** | **3930.42** |

| | | |
|---|---|---|
| ಆ) | ಕಾಡುಪ್ರಾಣಿಗಳ ಹಾವಳಿಯಿಂದ ತೋಟಗಾರಿಕಾ ಬೆಳೆಗಳಿಗೆ ಉಂಟಾಗುತ್ತಿರುವ ನಷ್ಟಕ್ಕೆ ವಿಶೇಷ ಪರಿಹಾರ ಯೋಜನೆ ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: | ಕಾಡುಪ್ರಾಣಿಗಳ ಹಾವಳಿಯಿಂದ ತೋಟಗಾರಿಕಾ ಬೆಳೆಗಳಿಗೆ ಉಂಟಾಗುತ್ತಿರುವ ನಷ್ಟಕ್ಕೆ ಅರಣ್ಯ ಇಲಾಖೆ ಮಾರ್ಗಸೂಚಿ ಪ್ರಕಾರ ಪರಿಹಾರವನ್ನು ಅರಣ್ಯ ಇಲಾಖೆ ನೀಡುತ್ತಿದ್ದು, ವಿಶೇಷ ಪರಿಹಾರ ಘೋಷಿಸುವ ಪ್ರಸ್ತಾವನೆ ಇರುವುದಿಲ್ಲ. |
| ಇ) | ಹವಾಮಾನ ಬದಲಾವಣೆಯಿಂದ ಕಾಫಿ. ಕಾಳುಮೆಣಸು ಮತ್ತು ಏಲಕ್ಕಿ ಉತ್ಪಾದನೆ ಕುಸಿಯುತ್ತಿರುವ ಹಿನ್ನಲೆಯಲ್ಲಿ ಕೊಡಗು ಜಿಲ್ಲೆಗೆ ವಿಶೇಷ ತೋಟಗಾರಿಕಾ ಪ್ಯಾಕೇಜ್ ಘೋಷಿಸುವ ಉದ್ದೇಶ ಸರ್ಕಾರಕ್ಕಿದೆಯೇ: | ವಿಶೇಷ ಪ್ಯಾಕೇಜ್ ಘೋಷಿಸುವ ಉದ್ದೇಶ ಇರುವುದಿಲ್ಲ. |
| ಈ) | ಕೊಡಗು ಜಿಲ್ಲೆಯ ತೋಟಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ರಫ್ತು ಉತ್ತೇಜನಕ್ಕಾಗಿ ವಿಶೇಷ ಯೋಜನೆ ರೂಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | • ಕೊಡಗು ಜಿಲ್ಲೆಯನ್ನು ಒಳಗೊಂಡಂತೆ ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ಮೌಲ್ಯವರ್ಧನೆಗಾಗಿ ಸಂಸ್ಕರಣಾ ಘಟಕ ಸ್ಥಾಪಿಸಲು ಆಸಕ್ತ ರೈತರಿಗೆ/ ರೈತ ಉತ್ಪಾದಕ ಸಂಸ್ಥೆಗಳು/ಸಹಕಾರಿ ಸಂಸ್ಥೆಗಳಿಗೆ ಸಹಾಯಧನವನ್ನು ಈ ಕೆಳಕಂಡ ಯೋಜನೆಗಳಡಿ ನೀಡಲಾಗುತ್ತಿದೆ.<br>1. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಘಟಕ ಸ್ಥಾಪಿಸಲು ತಗಲುವ ಒಟ್ಟು ಘಟಕ ವೆಚ್ಚ ರೂ.200.00 ಲಕ್ಷಗಳಲ್ಲಿ ಶೇ.25 ರಷ್ಟು ರೂ. 50.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ.<br>2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ರಾಥಮಿಕ ಸಂಸ್ಕರಣಾ ಘಟಕ ಸ್ಥಾಪಿಸಲು ತಗಲುವ ಘಟಕ ವೆಚ್ಚ ರೂ.35.00 ಲಕ್ಷಗಳಲ್ಲಿ ಶೇ.35 ರಷ್ಟು 12.25 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ.<br>3. ತೋಟಗಾರಿಕೆ ಬೆಳೆಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಚಟುವಟಿಕೆಗಳಿಗೆ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯಡಿ (PMFME- Pradhan Mantri Formalisation of Micro food processing Enterprises Scheme) ವೈಯಕ್ತಿಕ/ಗುಂಪು ಉದ್ದಿಮೆಗಳಿಗೆ ಒಟ್ಟು ಯೋಜನಾ ವೆಚ್ಚದ ಶೇ.50 ರಷ್ಟು ಗರಿಷ್ಠ ರೂ.15.00 ಲಕ್ಷಗಳವರೆಗೆ ಸಹಾಯಧನ |

| | | |
|---|---|---|
| | | ನೀಡಲಾಗುತ್ತಿದೆ. ಇದರಲ್ಲಿ ರಾಜ್ಯ ಸರ್ಕಾರದ ಸಹಾಯಧನ ರೂ.9.00 ಲಕ್ಷ ಹಾಗೂ ಕೇಂದ್ರ ಸರ್ಕಾರದ ಸಹಾಯಧನ ರೂ.6.00 ಲಕ್ಷಗಳಾಗಿರುತ್ತದೆ.<br>4. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಬೆಂಗಳೂರು ವತಿಯಿಂದ ಸಹಾಯಧನವನ್ನು ಈ ಕೆಳಕಂಡ ರಫ್ತು ಉತ್ತೇಜನ ಚಟುವಟಿಕೆಗಳಿಗೆ ನೀಡಲಾಗುತ್ತಿದೆ:<br>1. ರಫ್ತು ಉದ್ದೇಶಕ್ಕಾಗಿ ಅಪೇಡಾ ಮಾನ್ಯತೆ ಪಡೆದ ಪ್ಯಾಕ್-ಹೌಸ್ ಅನ್ನು ಬಳಸಿಕೊಳ್ಳಲು.<br>2. ಮಾರುಕಟ್ಟೆ ಸಂಪರ್ಕಕ್ಕಾಗಿ ದೇಶೀಯ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಮೇಳಗಳಲ್ಲಿ ಭಾಗವಹಿಸುವಿಕೆಗೆ.<br>3. B2B B2C ಸಭೆಗಳನ್ನು ಏರ್ಪಡಿಸುವುದು ಮತ್ತು ರಿವರ್ಸ್ ಖರೀದಿದಾರರು ಮಾರಾಟಗಾರರ ಸಭೆ ಆಯೋಜನೆಗೆ.<br>4. ರಫ್ತು ಉದ್ದೇಶಕ್ಕಾಗಿ ಆಹಾರ ಮಾದರಿಗಳ ಲ್ಯಾಬ್ ವಿಶ್ಲೇಷಣೆಗೆ ಸಹಾಯಧನ.<br>5. ಕೃಷಿ-ರಫ್ತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವುದು.<br>6. ಆಹಾರ ಉತ್ಪನ್ನಗಳ ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕಿಂಗ್ ತಂತ್ರಜ್ಞಾನ ವರ್ಗಾವಣೆಗಾಗಿ ನೆರವು ಒದಗಿಸಲಾಗುವುದು.<br>7. ರಫ್ತು ಉದ್ದೇಶಕ್ಕಾಗಿ ಅವಶ್ಯಕವಿರುವ ಪ್ರಮಾಣ ಪತ್ರಗಳನ್ನು ಪಡೆಯಲು ಸಹಾಯಧನ ಒದಗಿಸಲಾಗುವುದು.<br><br>ಕೊಡಗು ಜಿಲ್ಲೆಯ ತೋಟಗಾರಿಕೆ ಉತ್ಪನ್ನಗಳ ಮೌಲ್ಯ ವರ್ಧನೆ ಮತ್ತು ರಫ್ತು ಉತ್ತೇಜನಕ್ಕಾಗಿ ಸರ್ಕಾರದಿಂದ ವಿಶೇಷ ಯೋಜನೆ ರೂಪಿಸಲಾಗಿರುವುದಿಲ್ಲ. |

ಸಂಖ್ಯೆ: HORTI 432 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು